ವಿಷಯ. ಬೀದರ್ ಜಿಲ್ಲೆಯ ಕಾರಂಜ ಯೋಜನೆಯನ್ನು ಪೂರ್ಣಗೊಳಿಸುವ ಬಗ್ಗೆ.

ಪ್ರ. 269 (24) ಶ್ರೀ ಭೀಮಣ್ಣ ಖಂಡ್ರೆ* (ಭಾಲ್ಕಿ),—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಬೀದರ್ ಜಿಲ್ಲೆಯು ದಶಕ ಹಿಂದಿನಿಂದಲೂ ಅಭಾವಪೀಡಿತ ಜಿಲ್ಲೆ ಎಂಬುದು ಸರ್ಕಾರಕ್ಕೆ ತಿಳಿದಿದೆಯೇ;

(ಆ) ಈ ಜಿಲ್ಲೆಯ ಶೇಕಡಾ ನೀರಾವರಿ ಪ್ರದೇಶವು ರಾಜ್ಯದಲ್ಲೇ ಕನಿಷ್ಠವೆಂಬುದು ನಿಜವಲ್ಲವೇ ;

(ಇ) ಮಂಜರ ಮತ್ತು ಕಾರಂಜ ನದಿಗಳ ನೀರನ್ನು ಸರಿಯಾದ ರೀತಿಯಲ್ಲಿ ನೀರಾವರಿಗಾಗಿ ಉಪಯೋಗಿಸದಿರುವುದು ಮತ್ತು ಯಾವ ನೀರಾವರಿ ಯೋಜನೆಯೂ ಈವರೆವಿಗೂ ಪೂರ್ಣಗೊಂಡಿಲ್ಲದಿರುವುದು ನಿಜವಲ್ಲವೇ ;

(ಈ) 1971 ರ ತೀವ್ರ ಕ್ಷಾಮಪೀಡಿತವಾದ ಬೀದರ್ ಜಿಲ್ಲೆಯಲ್ಲಿ ಕಾರಂಜ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಿ ಹತ್ತು ವರ್ಷಗಳ ಅವಧಿಯಲ್ಲೇ ಪೂರ್ಣಗೊಳಿಸುವ ಯೋಜನೆ ಇರಲಿಲ್ಲವೇ;

(ಉ) ಉದ್ದೇಶಿಸಿದ ಕಾರ್ಯಕ್ರಮದ ಪ್ರಕಾರ ಈ ಯೋಜನೆಯನ್ನು ಪೂರ್ಣಗೊಳಿಸದಿದ್ದುದರಿಂದ ಯೋಜನೆಯ ಅಂದಾಜು ರೂ. 9 ಕೋಟಿಯಿಂದ ರೂ. 54 ಕೋಟಿಗಳಿಗೆ ಹೆಚ್ಚಿರುವುದು ನಿಜವಲ್ಲವೇ ;

(ಊ) 1982–83 ನೇ ಸಾಲಿನ ಮಂಜೂರಾದ ಅಂದಾಜು ಮತ್ತು ಖರ್ಚು ;

(ಋ) ಯೋಜನೆಯನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸುವ ಉದ್ದೇಶದಿಂದ, ಸರ್ಕಾರವು ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಹಣವನ್ನು ಒದಗಿಸುವುದೇ ;

(ಋೂ) ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಗೆ ರೂ. 16 ಕೋಟಿಗಳನ್ನು ಸೀಮಿತಗೊಳಿಸಿರುವುದು ಮತ್ತು ಸರ್ಕಾರವು ಇನ್ನುಳಿದ ಎರಡು ವರ್ಷಗಳಲ್ಲಿ ರೂ. 16 ಕೋಟಿಗಳನ್ನು ವ್ಯಯ ಮಾಡಲು ನಿಶ್ಚಯಿಸಿರುವುದು ನಿಜವಲ್ಲವೇ ;

(ಎ) ಹಾಗಿದ್ದಲ್ಲಿ, ಮುಂದಿನ 5 ವರ್ಷಗಳ ಅವಧಿಯಲ್ಲೇ ಈ ಯೋಜನೆಯನ್ನು ಪೂರ್ಣಗೊಳಿಸಲು ಸಾಲಿಯಾನ ರೂ. 8 ಕೋಟಿಗಳನ್ನು ಮಂಜೂರು ಮಾಡುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

(ಅ) ತಿಳಿದಿದೆ.

(ಆ) ಬೀದರ್ ಜಿಲ್ಲೆಯ ಶೇಕಡಾ ನೀರಾವರಿ ಪ್ರದೇಶವೂ ರಾಜ್ಯದಲ್ಲೇ ಕನಿಷ್ಠವಲ್ಲ.

(ಇ) ಕಾರಂಜ ಬೃಹತ್ ನೀರಾವರಿ ಯೋಜನೆಯೂ ಮತ್ತು ಚುಲ್ಕಿನಾಲಾ ಮಧ್ಯಮ ನೀರಾವರಿ ಯೋಜನೆಯೂ ಈಗಾಗಲೇ ನಿರ್ಮಾಣ ಹಂತದಲ್ಲಿದೆ. ಇವಲ್ಲದೆ, ಮಂಜರ ಏತ ನೀರಾವರಿ ಯೋಜನೆಯು ಮತ್ತು ಹಲವಾರು ಸಣ್ಣ ನೀರಾವರಿ ಯೋಜನೆಗಳ ಆನ್ವೇಷಣಾ ಕಾರ್ಯವನ್ನು ಕೈಗೊಳ್ಳಲಾಗಿದೆ.

(ಈ) ಕ್ಷಾಮ ನಿವಾರಣಾ ಕಾರ್ಯಕ್ರಮದ ಅಂಗವಾಗಿ 1972 ನೇ ಇಸವಿ ಡಿಸೆಂಬರ್ ಮಾಹೆಯಲ್ಲಿ ಕಾರಂಜ ಯೋಜನೆಯ ಕೆಲಸವನ್ನು ಪ್ರಾರಂಭಮಾಡಿ ತೀವ್ರವಾಗಿ ಪೂರ್ಣಗೊಳಿಸುವ ಕಾರ್ಯಕ್ರಮವನ್ನು ಹಣದ ಲಭ್ಯತೆ ಮೇಲೆ ಅವಲಂಬಿಸಿ ಹಾಕಿಕೊಳ್ಳಲಾಗಿತ್ತು.

(ಉ) 1969 ನೇ ಇಸವಿಯಲ್ಲಿ ಮಂಜೂರಾದ ಯೋಜನೆಯ ಅಂದಾಜು ರೂ. 9·9 ಕೋಟಿಗಳಾಗಿದ್ದು ಇದರ ಪ್ರಕಾರ 67,000 ಎಕರೆಗಳಿಗಷ್ಟೇ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶವಿತ್ತು. 1982–83 ನೇ ಸಾಲಿನ ಅಂದಾಜಿನ ಪ್ರಕಾರ ಪರಿಷ್ಕೃತ ಯೋಜನೆಯ ಅಂದಾಜು ರೂ. 51·53 ಕೋಟಿ ಗಳಾಗಿರುತ್ತದೆ ಮತ್ತು ಇದರಂತೆ 1,11,000 ಎಕರೆಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶವಿದೆ.

(ಊ) ಬಡ್ಜೆಟ್ ಅಂದಾಜು: 1982–83	ರೂ. 222 ಲಕ್ಷಗಳು.
ಹೆಚ್ಚುವರಿ ಅಂದಾಜು ಮೊಬಲಗು	ರೂ. 150 ಲಕ್ಷಗಳು.
ಒಟ್ಟು ಬಡ್ಜೆಟ್ ಅಂದಾಜು	ರೂ. 372 ಲಕ್ಷಗಳು
1982–83 ನೇ ಸಾಲಿನ ಖರ್ಚು	ರೂ. 329·63 ಲಕ್ಷಗಳು
(ಋ) ಬಡ್ಜೆಟ್ ಅಂದಾಜು: 1983–84	ರೂ. 300 ಲಕ್ಷಗಳು.

ಈ ಸಾಲಿನಲ್ಲಿ ಹೆಚ್ಚುವರಿ ಹಣ ಒದಗಿಸುವ ಪ್ರಶ್ನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

(ಋೂ) ಹೌದು; ಮತ್ತು ಆರನೇ ಪಂಚವಾರ್ಷಿಕ ಯೋಜನೆಯ ಅವಧಿಯೊಳಗೆ ಎಲ್ಲಾ ಪೂರ್ತಾ 16 ಕೋಟಿ ರೂಪಾಯಿಗಳನ್ನು ಖರ್ಚುಮಾಡಲು ಯೋಜಿಸಲಾಗಿದೆ.

(ಎ) ರಾಜ್ಯದ ಸಂಪನ್ಮೂಲದ ಮೇಲೆ ನೀರಾವರಿ ವಲಯದ ಹಣದ ಲಭ್ಯತೆಯನ್ನನುಸರಿಸಿ ಈ ಯೋಜನೆಯನ್ನು 1989–90 ರ ವೇಳೆಗೆ ಪೂರ್ಣಗೊಳಿಸುವ ಕಾರ್ಯಕ್ರಮ ಹಾಕಲಾಗಿದೆ.

---

*ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಅಧ್ಯಕ್ಷರು.—ಪ್ರಶ್ನೆ 86 ಮತ್ತು 146 ಎರಡನ್ನೂ ಒಟ್ಟಿಗೆ ತೆಗೆದುಕೊಂಡರೆ ಸದಸ್ಯರು ಪ್ರಶ್ನೆ ಕೇಳಲು ಅನುಕೂಲವಾಗುತ್ತದೆ.

ವಿಷಯ: ನೇತ್ರಾವತಿ ಹಾಗೂ ಇತರ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸುವುದು.

ಪ್ರ. 270 (86) ಶ್ರೀ ಧನುಂಜಯ ಕುಮಾರ್ (ಮಂಗಳೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ದಕ್ಷಿಣ ಕನ್ನಡ ಜಿಲ್ಲೆಯ ನೆರಿಯದಲ್ಲಿ ನೇತ್ರಾವತಿ ಅಥವಾ ಇತರ ನದಿಗಳಿಗೆ ಅಣೆಕಟ್ಟು ಕಟ್ಟಿಸಿ ಮಂಗಳೂರು ಮಹಾನಗರಪಾಲಿಕೆ ಪ್ರದೇಶ ಹಾಗೂ ಸುತ್ತಮುತ್ತಲೂ ಕುಡಿಯುವ ನೀರು ಹಾಗೂ ಕೈಗಾರಿಕೆಗಳಿಗೆ ಬೇಕಾಗುವ ನೀರು ಸರಬರಾಜು ಮಾಡುವ ನೆರಿಯ ಯೋಜನೆಯ ಕೆಲಸ ಪ್ರಾರಂಭಿಸುವ ಯೋಜನೆ ಸರಕಾರದವರ ಮುಂದೆ ಇದೆಯೇ;

(ಆ) ಈ ಯೋಜನೆಯ ನೀಲಿ ನಕಾಶೆ ತಯಾರಿಸಲಾಗಿದೆಯೇ;

(ಇ) ಯೋಜನೆಯ ಅಂದಾಜು ವೆಚ್ಚ ವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).:—

(ಅ) ಯೋಜನೆಯು ಸವಿಸ್ತಾರ ಅನ್ವೇಷಣೆಯ ಹಂತದಲ್ಲಿದೆ.

(ಆ) ಇಲ್ಲ.

(ಇ) ಪ್ರಾರಂಭಿಕ ವರದಿಯಂತೆ 201 ಕೋಟಿ ರೂಪಾಯಿಗಳು.

ವಿಷಯ: ಬೆಳ್ತಂಗಡಿ ತಾಲ್ಲೂಕು ನೆರಿಯ ಯೋಜನೆ ಕುರಿತು.

ಪ್ರ. 278 (146) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿರ್ಮಿಸಲುದ್ದೇಶಿಸಿರುವ ನೆರಿಯ ಯೋಜನೆಯ ಕಾರ್ಯ ಈಗ ಯಾವ ಹಂತದಲ್ಲಿ ಇದೆ;

(ಆ) ಸದರಿ ಯೋಜನೆಯಿಂದಾಗಿ ಮುಳುಗಡೆಯಾಗುವ ಪ್ರದೇಶಗಳಾವುವು ಹಾಗೂ ಇದರ ವಿಸ್ತೀರ್ಣ ಎಷ್ಟು;

(ಇ) ಮುಳುಗಡೆ ಪ್ರದೇಶದ ಜನರಿಗೆ ಸೂಕ್ತ ಪರಿಹಾರ ನೀಡದೆ ಅವರನ್ನು ಸ್ಥಳಾಂತರಿಸಬಾರದು ಮತ್ತು ಸ್ಥಳಾಂತರಗೊಂಡವರಿಗೆ ಬದಲಿ ವ್ಯವಸ್ಥೆ ಮಾಡದೆ ಸ್ಥಳಾಂತರಿಸಬಾರದು ಎಂಬುದು ಸರ್ಕಾರದವರ ನೀತಿಯಲ್ಲವೇ;

(ಈ) ಹಾಗಾದರೆ ಸರ್ಕಾರದವರು ಮುಳುಗಡೆ ಪ್ರದೇಶದ ಜನರಿಗೆ ಬದಲಿ ವ್ಯವಸ್ಥೆಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಅನ್ವೇಷಣೆಯಲ್ಲಿದೆ.

(ಆ) ಪೂರ್ಣ ಜಲಾಶಯ ಮಟ್ಟ ೧೧ ಎಲ್ 107·5 ಮೀಟರ್‌ಗಳವರೆಗೆ ಈ ಕೆಳಕಂಡ ಹಳ್ಳಿಗಳು ಮುಳುಗಡೆಯಾಗುತ್ತವೆ:

1. ಕಾಲಂಜಾ
2. ಪುಡುಪೆಟ್ಟು — ಪೂರ್ಣವಾಗಿ
3. ಪತ್ಯಾದಕ
4. ಚಿಬಿದ್ರಿ
5. ನಿಡ್ಲಿ — ಭಾಗಶಃ
6. ನೆರಿಯ

ಮುಳುಗಡೆಯಾಗುವ ಪ್ರದೇಶದ ವಿಸ್ತೀರ್ಣ —4050 ಹೆಕ್ಟೇರುಗಳು (ತಾತ್ಕಾಲಿಕ)
(10007 ಎಕರೆಗಳು)

(ಇ) ಅಹುದು.

(ಈ) ಸೂಕ್ತ ಸಮಯದಲ್ಲಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ವಿ. ಧನುಂಜಯ ಕುಮಾರ್.—ಮಂಗಳೂರು ಹತ್ತಿರ ಪೆಟ್ರೋಕೆಮಿಕಲ್ಸ್ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರ ಇದೆ. ಇದಕ್ಕೆ ಬೇಕಾದ ನೀರನ್ನು ಒದಗಿಸಲು ಅತ್ಯಂತ ಅಗತ್ಯವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಯೋಜನೆಗೆ ಬೇಕಾದಂಥ ನೀಲಿ ನಕಾಸೆಯನ್ನು ಯಾವಾಗ ತಯಾರಿಸುತ್ತೀರಿ? ಮತ್ತು ಈ ಯೋಜನೆಯಿಂದ ಆಗತಕ್ಕ ಇತರ ಉಪಯೋಗಗಳಾದರೂ ಏನು ಎಂಬುದನ್ನು ಹೇಳುತ್ತೀರಾ?